

## ನೈಟಿಂಗೇಲ್ ದ್ವಿಶತಮಾನೋತ್ಸವ

2020 ಫ್ಲಾರೆನ್ಸ್ ನೈಟಿಂಗೇಲ್ ಅವರ ದ್ವಿಶತಮಾನೋತ್ಸವ ವರ್ಷ. ಆ ಕಾರಣದಿಂದಾಗಿ, 'ವಿಶ್ವ ಆರೋಗ್ಯ ಸಂಸ್ಥೆ', ದೀಪಧಾರಿಣಿಯ 200ನೇ ಜಯಂತಿಯ ವರ್ಷವನ್ನು 'ಇಯರ್ ಆಫ್ ನರ್ಸ್ ಅಂಡ್ ಮಿಡ್‌ವೈವ್ಸ್' ಎಂದು ಘೋಷಿಸಿದೆ. ಇದೇ ಸಂದರ್ಭದಲ್ಲಿ 'ಇಂಟರ್ ನ್ಯಾಷನಲ್ ಕೌನ್ಸಿಲ್ ಫಾರ್ ನರ್ಸಿಂಗ್‌ನ' ಸಹಯೋಗದಲ್ಲಿ ಇತ್ತೀಚೆಗಷ್ಟೇ, ಜಗತ್ತಿನಲ್ಲಿ ನರ್ಸಿಂಗ್ ಕ್ಷೇತ್ರ ಸ್ಥಿತಿಗತಿ ಹೇಗಿದೆ ಎಂಬ ಬಗ್ಗೆ ಅಧ್ಯಯನ ವರದಿಯೊಂದನ್ನು ಬಿಡುಗಡೆ ಮಾಡಿದೆ. 2030ರ ವೇಳೆಗೆ ಜಗತ್ತಿನಲ್ಲಿ ಶುಶ್ರೂಷಕಿಯರ ಕೊರತೆ ಎದುರಾಗಲಿದೆ ಎಂಬ ಅಂದಾಜಿನ ಹಿನ್ನೆಲೆಯಲ್ಲಿ 191 ಸದಸ್ಯ ರಾಷ್ಟ್ರಗಳಲ್ಲಿ ಪ್ರಸ್ತುತ ಸ್ಥಿತಿಗತಿ ಹೇಗಿದೆ ಎಂಬ ಅಧ್ಯಯನ ವರದಿಯನ್ನು ಸಿದ್ಧಪಡಿಸಲಾಗಿದೆ. ಆಫ್ರಿಕಾ, ಆಗ್ನೇಯ ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕದಲ್ಲಿ ಶುಶ್ರೂಷೆ ಮಾಡುವವರ ಸಂಖ್ಯೆಯಲ್ಲಿ ಗಣನೀಯ ಇಳಿಕೆ ಆಗುತ್ತಿರುವುದನ್ನು ವರದಿ ಗಮನಿಸಿದೆ. ಪ್ರಸ್ತುತ ನರ್ಸಿಂಗ್ ಕ್ಷೇತ್ರದಲ್ಲಿ ಇರುವವರ ಪೈಕಿ, ಮುಂದಿನ 10 ವರ್ಷಗಳ ಅವಧಿಯಲ್ಲಿ ಆರು ಮಂದಿಯಲ್ಲಿ ಒಬ್ಬರು ನಿವೃತ್ತರಾಗಲಿದ್ದಾರೆ. ಆದ್ದರಿಂದ ಈ ಕ್ಷೇತ್ರಕ್ಕೆ ಬರುವ ಹೊಸಬರಿಗೆ ಹೆಚ್ಚು ಅವಕಾಶಗಳಿವೆ' ಎಂದು ವರದಿ ಹೇಳಿದೆ.

ಶುಶ್ರೂಷೆಯ ವಲಯದಲ್ಲಿ ಶೇ. 90ರಷ್ಟು ಮಹಿಳೆಯರೇ ಇದ್ದಾರೆ. ಆದರೆ ಈ ಕ್ಷೇತ್ರದ ಮುಖ್ಯ ಹುದ್ದೆಗಳಲ್ಲಿ ಪುರುಷ ಶುಶ್ರೂಷಕರೇ ಇದ್ದಾರೆ. ಈ ವ್ಯತ್ಯಾಸವನ್ನು ಸರಿಪಡಿಸಲು ಹಾಗೂ ನರ್ಸಿಂಗ್ ಕ್ಷೇತ್ರಕ್ಕೆ ಇನ್ನಷ್ಟು ಬಲ ನೀಡಲು ಸರ್ಕಾರ ಮುಂದಾಗಬೇಕು. ನರ್ಸಿಂಗ್ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕು ಎಂಬ ಕಿವಿಮಾತನ್ನು ವರದಿ ಹೇಳಿದೆ.

ಮನೆಮಟ್ಟಿಗೆ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಧೋರಣೆ ಇಷ್ಟವಾಗಲಿಲ್ಲ. ಅಪ್ಪನೊಡನೆ ಒಮ್ಮೆ ಯೂರೋಪ್ ಪ್ರವಾಸಕ್ಕೆ ಹೋದಾಗ, ಅವರಿಗೆ ಮೇರಿ ಕ್ಲಾರ್ಕ್ ಎಂಬ ಮಹಿಳೆಯ ಪರಿಚಯವಾಯಿತು. ಆಕೆಯದು ಅತಿಥಿಗಳನ್ನು ಉಪಚರಿಸುವ ಆತಿಥ್ಯಕಾರಿಣಿಯ ಕೆಲಸ. ವಯಸ್ಸಿನಲ್ಲಿ ಫ್ಲಾರೆನ್ಸ್‌ಗಿಂತಲೂ ಮೇರಿ ದೊಡ್ಡವರಾದರೂ ಇಬ್ಬರೂ ಜೀವದ ಗೆಳತಿಯರಾದರು. ಮಹಿಳೆಯರ ಹಕ್ಕು ಸಾಮರ್ಥ್ಯಗಳ ಕುರಿತು ತಮ್ಮದೇ ಆದ ನಿಲುವು ಹೊಂದಿದ್ದ ಮೇರಿ ಕ್ಲಾರ್ಕ್ ಅವರು ಫ್ಲಾರೆನ್ಸ್ ಮೇಲೆ ಪ್ರಭಾವ ಬೀರಿದ್ದರು.

ತಮ್ಮ 24ನೇ ವಯಸ್ಸಿನಲ್ಲಿ ಫ್ಲಾರೆನ್ಸ್, ಇಡೀ ಕುಟುಂಬದ ಸಿಟ್ಟಿಗೆ ಕಾರಣವಾಗುವ ನಿರ್ಧಾರ ಪ್ರಕಟಿಸಿದರು. ಶುಶ್ರೂಷೆಯ ಕ್ಷೇತ್ರದಲ್ಲಿ ತೊಡಗಿಕೊಳ್ಳುವ ತಾನು ಮದುವೆ, ಕುಟುಂಬದಂತಹ ಸಾಮಾಜಿಕ ಚೌಕಟ್ಟಿಗೆ ಒಳಗಾಗುವುದಿಲ್ಲ ಎಂದು ಪ್ರಕಟಿಸಿದರು. ಮುದ್ದಿನ ಮಗಳು ಹೀಗೆ ಹೇಳಿದರೆ ಯಾವ ಪೋಷಕರಿಗೆ ತಾನೆ ಸಿಟ್ಟು ಬರುವುದಿಲ್ಲ? ಆದರೆ, ಫ್ಲಾರೆನ್ಸ್ ಅವರಿಗೆ ತಮ್ಮ ಮುಂದಿನ ದಾರಿ ಸ್ಪಷ್ಟವಾಗಿತ್ತು.

ಎತ್ತರದ ನಿಲುವಿನ, ಅಷ್ಟೇ ಎತ್ತರದ ವ್ಯಕ್ತಿತ್ವದ ಫ್ಲಾರೆನ್ಸ್, ನರ್ಸಿಂಗ್ ಕಲಿಕೆಯನ್ನು ಕ್ರಮಬದ್ಧವಾಗಿ ಶುರು ಮಾಡಿದರು. ಕ್ರಿಮಿಯನ್ ಯುದ್ಧ ನಡೆದಾಗ, ಬ್ರಿಟಿಷ್ ಸೈನ್ಯದ ಉಸ್ತುವಾರಿ ಸಿಡ್ನಿ ಹರ್ಬರ್ಟ್ ಎನ್ನುವ ಅಧಿಕಾರಿಯದಾಗಿತ್ತು. ಯಾವುದೋ ಸಂದರ್ಭದಲ್ಲಿ ತನಗೆ ಪರಿಚಿತಳಾಗಿದ್ದ ಫ್ಲಾರೆನ್ಸ್‌ಳನ್ನು ಆತ ಯುದ್ಧಕಾಲದ ಆಸ್ಪತ್ರೆಗೆ ತೆರಳುವುದಕ್ಕೆ ಅವಕಾಶ ಕಲ್ಪಿಸಿದ. ಕ್ರಿಮಿಯಾದಲ್ಲಿ ಸೈನಿಕರ ಆಸ್ಪತ್ರೆಗೆ ಭೇಟಿ ನೀಡಿದ ಬಳಿಕ, ಫ್ಲಾರೆನ್ಸ್ ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿ, ಸುಧಾರಣೆಗಳನ್ನು ಮಾಡುವಂತೆ ಪತ್ರಿಕೆಯ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿದರು. ಅದಕ್ಕೆ ಸರ್ಕಾರ ಸ್ಪಂದಿಸಿದ ಪರಿಣಾಮ, ಆರೋಗ್ಯ ಕ್ಷೇತ್ರದ ಸುಧಾರಣೆ ಮತ್ತು ಆಸ್ಪತ್ರೆ ನಿರ್ಮಾಣದಿಂದ ಗಾಯಾಳುಗಳ ಸಾವಿನ ಸಂಖ್ಯೆ ಗಣನೀಯವಾಗಿ ಕಡಿಮೆ ಆಯಿತು. ಹೀಗೆ ನರ್ಸಿಂಗ್ ಕ್ಷೇತ್ರವನ್ನು ಫ್ಲಾರೆನ್ಸ್ ಅವರು ಸಮಗ್ರವಾಗಿ ಗ್ರಹಿಸಿ, ಅಲ್ಲಿನ ಸಮಸ್ಯೆಗಳನ್ನು ಕುರಿತು ಸರ್ಕಾರಕ್ಕೆ ಮನದಟ್ಟು ಮಾಡುವ ವಿಧಾನಗಳನ್ನು ಕಂಡುಕೊಂಡರು. ಪೈ ಚಾರ್ಟ್ ಅನ್ನು ಬಳಸಿ ಸಾವಿನ ಪ್ರಮಾಣ, ಆರೋಗ್ಯ ಸೌಕರ್ಯ ಮತ್ತು ಸುಧಾರಣೆಯಿಂದ ಆಗುವ ಲಾಭಗಳ ಕುರಿತು ಆಡಳಿತದ ಗಮನ ಸೆಳೆದರು. 'ರಾಯಲ್ ಸ್ಟಾಟಿಸ್ಟಿಕಲ್ ಸೊಸೈಟಿ' ಸದಸ್ಯೆಯಾಗಿ ಮತ್ತು ಅಮೆರಿಕನ್ ಸ್ಟಾಟಿಸ್ಟಿಕಲ್ ಅಸೋಸಿಯೇಷನ್‌ನ ಗೌರವ ಸದಸ್ಯೆಯಾಗಿ ಆಕೆ ಸುಧಾರಣೆಗಳ ವಿಚಾರಗಳನ್ನು ಮಂಡಿಸಿದರು.

ಭಾರತದಲ್ಲಿದ್ದ ಬ್ರಿಟಿಷ್ ಸೇನೆಯ ಕುರಿತು ಫ್ಲಾರೆನ್ಸ್ ತಮ್ಮ ವಿಚಾರಗಳನ್ನು ಮಂಡಿಸಿದರು. ಭಾರತದಲ್ಲಿಯೂ ಆರೋಗ್ಯ ಸುಧಾರಣೆ ಕುರಿತು ಅಧ್ಯಯನ ನಡೆಸಿದರು. ಜೀವನ ಪೂರ್ತಿ ಅವರು ತಮ್ಮನ್ನು ನರ್ಸಿಂಗ್ ಕ್ಷೇತ್ರದ ಸುಧಾರಣೆಗೆ ಅರ್ಪಿಸಿಕೊಂಡರು. ಪ್ರಸ್ತುತ ನರ್ಸಿಂಗ್ ಕ್ಷೇತ್ರ ಅಗಾಧವಾಗಿ ಹಾಗೂ ವ್ಯವಸ್ಥಿತವಾಗಿ ಬೆಳೆದಿರುವುದರ ಹಿನ್ನೆಲೆಯಲ್ಲಿ ಫ್ಲಾರೆನ್ಸ್ ಅವರ ತ್ಯಾಗ–ಶ್ರಮದ ಪಾತ್ರ ದೊಡ್ಡದಿದೆ.

ಪ್ರಸ್ತುತ ಇಡೀ ವಿಶ್ವವೇ ಕೋವಿಡ್ 19ರ ಆತಂಕದಲ್ಲಿ ಮಂಕಾಗಿರುವ ಸಂದರ್ಭದಲ್ಲಿ ಶುಶ್ರೂಷಕಿಯರ ಮಹತ್ವ ಮತ್ತೆ ಸಮಾಜದ ಗಮನಸೆಳೆದಿದೆ. ರೋಗಿಯ ಸೋಂಕನ್ನು ಮೊದಲು ಎದುರಿಸುವವರು ಶುಶ್ರೂಷಕಿಯರೇ. ರೋಗದ ಕುರಿತು ಮಾಹಿತಿ ಕಡಿಮೆಯಿದ್ದಾಗಲಂತೂ ಅವರು ತಮ್ಮ ಯಾವತ್ತಿನ ಶೈಲಿಯಲ್ಲಿ ನಿಸ್ವಾರ್ಥದಿಂದ ಆರೈಕೆ ಮಾಡುತ್ತ, ರೋಗದ ಕೇಡಿಗೆ ಸ್ವತಃ ತುತ್ತಾದ ಉದಾಹರಣೆಗಳಿವೆ.

### 'ಕೋವಿಡ್ 19' ಮರಣಮೃದಂಗ

ಕೊರೊನಾ ಸೋಂಕಿನ ಮರಣಮೃದಂಗ ಮೊದಲು ಅನುರಣಿಸಿದ್ದು ಚೀನಾದ ವುಹಾನ್‌ನಲ್ಲಿ. ಅಲ್ಲಿನ ಆಸ್ಪತ್ರೆಯೊಂದರಲ್ಲಿ ಶುಶ್ರೂಷೆ

ಕೈಯಲ್ಲಿ ಚಿಮಿಣಿ ಹಿಡಿದ ಫ್ಲಾರೆನ್ಸ್ ಗಾಯಾಳುಗಳ ಬಳಿಗೆ ಸಾಗಿ, ಗಾಯಗಳಿಗೆ ಔಷಧಿ ಹಚ್ಚುತ್ತಿದ್ದರು. ಈ ಚಿತ್ರವು ಜಗತ್ತಿನ ಮಾನವೀಯ ಚಿತ್ರವೆಂದೇ ಪ್ರಸಿದ್ಧವಾಗಿದೆ.

ಸೋಂಕಿನಿಂದ ಚೇತರಿಸಿಕೊಂಡ ಕೇರಳದ ಹಿರಿಯ ದಂಪತಿ ಅಬ್ರಹಾಂ ಮತ್ತು ಮರಿಯಮ್ಮ

